O.S. ನಂಬರಃ 23/2023

ಪಿ. ಡಬ್ಲ್ಯೂಃ 1

ದಿಃ 21-02-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

ನೀವು ಗೌಂಡಿ ಕೆಲಸವನ್ನು ಮಾಡಲು ಸರಕಾರದಿಂದ ಪರವಾಣಿಗೆಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಕಾರ್ಮಿಕ ಕಾರ್ಡ ಇರುತ್ತದೆ ಎಂದು ನುಡಿಯುತ್ತಾರೆ. ಎಷ್ಟನೇ ಸಾಲಿನಿಂದ ಕಾರ್ಮಿಕ ಕಾರ್ಡನ್ನು ಪಡೆದುಕೊಂಡಿರುತ್ತೀರ ಎಂದರೆ ನೆನಪಿರುವುದಿಲ್ಲ. ತಕರಾರು ಮನೆಯನ್ನು ಕಟ್ಟುವ ಸಮಯದಲ್ಲಿ ನಿಮ್ಮ ಹತ್ತಿರ ಕಾರ್ಮಿಕ ಕಾರ್ಡ ಆಗಲಿ ಅಥವಾ ಬೇರೆ ಕಾರ್ಡ ಆಗಲಿ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಎಷ್ಟನೇ ವರ್ಷದಿಂದ ಗೌಂಡಿ ಕೆಲಸವನ್ನು ಮಾಡಲು ಪ್ರಾರಂಭಿಸಿರುತ್ತೀರಿ ಎಂದರೆ ಸಾಕ್ಷಿಯು ನಾನು 16ನೇ ವಯಸ್ಸಿನವರು ಇದ್ದಾಗಿನಿಂದ ಗೌಂಡಿ ಕೆಲಸವನ್ನು ಮಾಡಲು ಪ್ರಾರಂಭಿಸಿರುತ್ತೇನೆ ಎಂದು ನುಡಿಯುತ್ತಾರೆ. ಸುರೇಶ ನಾಯಕ ಇವರು ಎಷ್ಟನೇ ಸಾಲಿನಲ್ಲಿ ಮದುವೆಯಾಗಿರುತ್ತದೆ ಎಂದರೆ ಗೊತ್ತಿರುವುದಿಲ್ಲ. ವಾದಿಯು ಸುರೇಶ ಇವರ ಪತ್ನಿ ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಸುರೇಶ ಇವರೇ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 20 ವರ್ಷಗಳ ಹಿಂದೆ ತಕರಾರು ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಯಾರ ಯಾರ

ಮನೆಯನ್ನು ಕಟ್ಟಿರುತ್ತೀರಿ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು 20 ವರ್ಷಗಳ ಹಿಂದೆ ತಕರಾರು ಮನೆಯನ್ನು ಕಟ್ಟಿದ್ದೂ ಇರುವುದಿಲ್ಲ ಹಾಗೂ ಸುರೇಶ ನಾಯಕ ಇವರು ಅಲ್ಲಿ ವಾಸ್ತವ್ಯ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ತಕರಾರಿ ಮನೆಯನ್ನು ಕಟ್ಟುವ ಸಮಯದಲ್ಲಿ ಸುರೇಶ ನಾಯಕ ಮತ್ತು ವಾದಿ ಎಲ್ಲಿ ವಾಸ್ತವ್ಯ ಮಾಡಿಕೊಂಡಿದ್ದರು ಎಂದರೆ ಗೊತ್ತಿರುವುದಿಲ್ಲ. ತಕರಾರಿ ಮನೆಯನ್ನು 2ನೇ ಪ್ರತಿವಾದಿಯು ಕಟ್ಟಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. 20 ವರ್ಷಗಳ ಹಿಂದೆ ಸುರೇಶ ನಾಯಕ ಆಗಲಿ ಅಥವಾ ಅವರ ಪತ್ನಿಯಾಗಲಿ ತಕರಾರಿ ಮನೆಯಲ್ಲಿ ವಾಸ್ತವ್ಯ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಹೆಗ್ಗಾರಮಕ್ಕಿ ಗ್ರಾಮದಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದರು ಎಂದರೆಸ ರಿಯಲ್ಲ. ನಿಮಗೆ ಸಾಕ್ಷಿಯನ್ನು ನುಡಿಯಲು ವಾದಿಯು ಯಾವಾಗ ಹೇಳಿರುತ್ತಾರೆ ಎಂದರೆ ನೆನಪಿರುವುದಿಲ್ಲ. ನಿಮ್ಮ ಮನೆಯಿಂದ ತಕರಾರಿ ಮನೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ಒಂದೂವರೆ ಕಿ.ಮೀ ಎಂದು ನುಡಿಯುತ್ತಾರೆ. ನೀವು 20 ವರ್ಷಗಳ ಹಿಂದೆ ಮನೆ ಕಟ್ಟಿರುತ್ತೀರಿ ಹೇಳುವ ಸಂದರ್ಭದಲ್ಲಿ ಸದರಿ ಮನೆ ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಹಾಗೂ ನಿಮಗೆ ಎಷ್ಟು ವರ್ಷಗಳಿಂದ ಪರಿಚಯವಿರುತ್ತದೆ ಎಂದರೆ ಸಾಕ್ಷಿಯು ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಪರಿಚಯವಾಗಿರುತ್ತದೆ ಎಂದು ನುಡಿಯುತ್ತಾರೆ. ಗೃಹಪ್ರವೇಶಕ್ಕೆ ಹೋಗಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಯವರ ಒತ್ತಾಯದ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದು, ನೀವು ಯಾವುದೇ ತಕರಾರಿ ಮನೆಯನ್ನು ಕಟ್ಟಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಸುರೇಶ ನಾಯಕ ಇವರ ಮದುವೆಯು

2002 ನೇ ಸಾಲಿನಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸುರೇಶ ನಾಯಕ ಇವರು ನೌಕರಿ ಮಾಡುತ್ತಿದ್ದರು ಎಂದರೆ ಸರಿ. ಹಾಗೂ ಅವರ ಖಾಯಂ ವಿಳಾಸ ಹೆಗ್ಗಾರಮಕ್ಕಿಗದ್ದೆಯಾಗಿತ್ತು ಎಂದರೆ ಗೊತ್ತಿರುವುದಿಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.